ಎಲ್ಲರಿಗೂ ಸಹಾಯ ಮಾಡುತ್ತೇವೆಂದು ಹೊರಟ್ಟಿದ್ದೀರಿ, ಅದರಂತೆ ಇವರಿಗೂ ಸಹಾಯ ಮಾಡಿ ಎಂದು ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಕಾನೂನಿನ ಅಡಚಣೆ ಇದೆ ಎಂದು ಹೇಳಿದ್ದೇನೆ. ಆದರೂ ಅವರು ಡಿವಿಜನಲ್ ಕಮಿಷನರ್ ಹಾಗೂ ಹಿಂದಿನ ಅಧಿಕಾರಿಗಳು ಆಜ್ಞೆಗಳನ್ನು ಮಾಡಿರುತ್ತಾರೆ ಎಂದು ಹೇಳಿದ್ದಾರೆ ಅದನ್ನು ಪರಿಶೀಲನೆ ಮಾಡುತ್ತೇನೆ.ಅವರು ಅಪ್ಲಿಕೇಶನ್ ಕಳಂಹಿಸಿಕೊಡಲಿ.

## ನಿಯಮ ೩೫೪ರ ಮೇರೆಗೆ

ಅಧ್ಯಕ್ಷರು,—ಮಾನ್ಯ ಖರ್ಗೆಯವರೇ, ನಿಯಮ ೩೫೪ರ ವಿಷಯಗಳನ್ನು ಈಗ ತೆಗೆದುಕೊಳ್ಳೋಣವೇ ಅಥವಾ ನಾಳೆ ಇಡೋಣವೆ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾಳೆ ತೆಗೆದುಕೊಳ್ಳಿ, ಏತಕ್ಕೆಂದರೆ ನಿಯಮ ೬೮ರಲ್ಲಿ ಪ್ರಸ್ತಾಪಿಸಲ್ಪಡುವ ವಿಚಾರ ಬಹಳ ಮುಖ್ಯವಾದುದು.

ಅಧ್ಯಕ್ಷರು.—೩೫೪ನೇ ನಿಯಮದ ವಿಷಯಗಳನ್ನು ನಾಳೆ ತೆಗೆದುಕೊಳ್ಳೋಣ. ಈಗ ನಿಯಮ ೬೮ರ ಮೇರೆಗೆ ಚರ್ಚೆ. ಶ್ರೀಮತಿ ನಾಗರತ್ನಮ್ಮನವರು ಹಾಗೂ ಇತರರಿಂದ ಕೇರಳದ ರಶೀದ್ ಎಂಬ ವಕೀಲರ ಕೊಲೆ ಪ್ರಕರಣದಲ್ಲಿ ಮಾಜಿ ಗೃಹಸಚಿವರ ರಾಜೀನಾಮೆಯಿಂದ ಉಂಟಾಗಿರುವ ಪರಿಸ್ಥಿತಿಯ ಬಗ್ಗೆ ಚರ್ಚೆ ನಡೆಸುವುದು.

ಶ್ರೀ ಪಟಮಕ್ಕಿ ರತ್ನಾಕರ್.—ಅಧ್ಯಕ್ಷರೇ ಸಭೆಯಲ್ಲಿ ಏನೋ ಒಂದು ಕಾನ್‌ಫೆರೆನ್ಸ್ ನಡೆಯುತ್ತಿದೆ

ಅಧ್ಯಕ್ಷರು.—ಅವರ ವಿಚಾರ ನಿಮಗೆ ಏತಕ್ಕೆ?

(ಗೊಂದಲ)

ಶ್ರೀ ವಿನಯಕುಮಾರ್ ಸೊರಕೆ.—ಅವರೆಲ್ಲಾ ಒಂದೇ ಕಡೆ ಸೇರಿ ಏನೋ ಮಾಡುತ್ತಿದ್ದಾರೆ. ಅಲ್ಲಿ ಏನೋ ನಡೆಯುತ್ತಿದೆ.

(ಗೊಂದಲ)

ಅಧ್ಯಕ್ಷರು.—ಅವರು ಒಟ್ಟಾಗಿರುವುದು ನಿಮಗೆ ಬೇಕಾಗಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ,—ಎಲ್ಲರನ್ನೂ ಕರೆಯುವುದು, ಸಿಗ್ನೇಚರ್ ಮಾಡಿಸುವುದು ಇದೆಲ್ಲ ಇಲ್ಲಿ ಏತಕ್ಕೆ? This House is meant for something else, i.e. for discussion and not for collecting signatures whether this side or that side

ಶ್ರೀ ಬಸವರಾಜ್ ಪಾಟೀಲ್ ಅನ್ವರಿ.—ನೀವು ರಾತ್ರಿ ಅವರನ್ನು ಹುಡುಕಾಡುವುದು ಬೇಡ ಎಂದು ಎಲ್ಲರೂ ಒಟ್ಟಾಗಿ ಇಲ್ಲೇ ಇದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ,—ನಾವು ಹುಡುಕಾಡುವುದಿಲ್ಲ. ನೀವೇ ಯಾರ್ಯಾರು ಎಲ್ಲೆಲ್ಲಿದ್ದಾರೆ ಎಂದು ಹುಡುಕಾಡುತ್ತೀರಿ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ,—ಆ ಹವ್ಯಾಸ ನಮಗಿಲ್ಲ. ನಮಗೆ ಬೇಕಾಗಿಲ್ಲ ನಮಗೆ ಏತಕ್ಕೆ ಆ ದುರಾದೃಷ್ಟದ ಹಣೆಬರಹ.